ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 139-148

IIMRD JOURNALS
www.iimrd.com

# ಬದಲಾಗುತ್ತಿರುವ ಕರ್ನಾಟಕದ ಬುಡಕಟ್ಟುಗಳು: ಒಂದು ಅವಲೋಕನ

ಮಂಜುನಾಥ ಬಿ.ಆರ್[1], ಎಂ.ಆರ್.ಗಂಗಾಧರ್[2] ಮತ್ತು ಶೈಲಜ ಕೆ[3]

**ಪೀಠಿಕೆ**

ಭೌಗೋಳಿಕವಾಗಿ ಕರ್ನಾಟಕ ರಾಜ್ಯವು ದಖ್ಖನ್ ಪ್ರಸ್ಥಭೂಮಿಯ ಮಧ್ಯಭಾಗದಲ್ಲಿದ್ದು, ಉತ್ತರಕ್ಕೆ 11.31 ಮತ್ತು 18.45 ಅಕ್ಷಾಂಶ ಬಿಂದುವಿನಲ್ಲಿಯೂ ಮತ್ತು ಪೂರ್ವಕ್ಕೆ 74.12 ಮತ್ತು 78.40 ರೇಖಾಂಶ ಬಿಂದುವಿನಲ್ಲಿಯೂ ನೆಲೆಗೊಂಡಿದ್ದು 1,91,791 ಚದುರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ. ಜೊತೆಗೆ ಅನೇಕ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ ಜನರು ಇಲ್ಲಿ ಕಂಡು ಬರುವುದ್ದರಿಂದ ಕೆಲವೊಮ್ಮೆ ಕರ್ನಾಟಕ ರಾಜ್ಯವನ್ನು 'ಮಾನವಶಾಸ್ತ್ರೀಯ ವಸ್ತು ಸಂಗ್ರಹಾಲಯ (Anthropological museum)' ಎಂದು ಕರೆಯಲಾಗಿದೆ. (ಕರ್ನಾಟಕ ಕೈಪಿಡಿ, 2011)

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ವ ಸಮುದಾಯಗಳು ಸಮಾನವಾಗಿ ಬದುಕುವ ಹಕ್ಕನ್ನು ಹೊಂದಬೇಕು ಎಂಬ ಹಿನ್ನಲೆಯಲ್ಲಿ ಹಲವಾರು ನೀತಿನಿಯಮಗಳನ್ನು ರೂಪಿಸಿ ವಿವಿಧ ಸವಲತ್ತುಗಳನ್ನು ಕಲ್ಪಿಸುತ್ತಿವೆ. ಆದರೂ ಹಲವಾರು ಕಾರಣಗಳಿಂದ ಬುಡಕಟ್ಟು ಸಮಾಜಗಳು ಸಮಾಜದ ಮುಖ್ಯವಾಹಿನಿಗೆ ಬರುವಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳ ಸ್ಥಿತಿಗತಿಗಳನ್ನು ಪ್ರಸ್ತುತ ಲೇಖನದಲ್ಲಿ ವಿಮರ್ಶಿಸಲಾಗಿದೆ.

ರಾಜ್ಯದಲ್ಲಿ ಆದಿಯನ್, ಬಿಲ್ಲ, ಗೊಂಡ, ಹಕ್ಕಿಪಿಕ್ಕಿ, ಹಸಲರು, ಸೋಲಿಗ, ಬೆಟ್ಟ (ಕಾಡು) ಕುರುಬ, ಜೇನುಕುರುಬ, ಕೊರಗ, ಮಲೆಕುಡಿಯ, ಇರುಳಿಗ, ಕಣಿಯನ್, ಕೋಳಿಧೋರ್, ಕೊಂಡಕಾಪು, ಪಣಿಯನ್, ಎರವ, ಸಿದ್ದಿ, ಮುಂತಾದ 50 ಬುಡಕಟ್ಟು ಪಂಗಡಗಳಿವೆ. (ವಿವರಗಳಿಗೆ ಪಟ್ಟಿ 1ನ್ನು ನೋಡಿ) ಇವರಲ್ಲಿ ಜೇನುಕುರುಬ ಮತ್ತು ಕೊರಗ ಬುಡಕಟ್ಟು

*[1]ಪಿಡಿಎಫ್ ಸಂಶೋಧಕ, [2]ಪ್ರಾಧ್ಯಾಪಕರು, [3]ಸಂಶೋಧಕರು (ನಿಕಟ ಪೂರ್ವ), ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

ಸಮುದಾಯವನ್ನು 'ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪು–Particularly vulnerable tribal group) ಪಟ್ಟಿಗೆ ಸೇರಿಸಲಾಗಿದೆ.

**ಕೋಷ್ಟಕ 1: ಬಡಕಟ್ಟುವಾರು ಮತ್ತು ಲಿಂಗವಾರು ಕರ್ನಾಟಕದ ಬುಡಕಟ್ಟು ಜನಸಂಖ್ಯೆ ವಿವರ**

| ಬುಡಕಟ್ಟು | ಪುರುಷ | ಮಹಿಳೆ | ಒಟ್ಟು |
|---|---|---|---|
| ಆಡಿಯನ್ | 373 | 385 | 758 |
| ಬಾರ್ದ | 139 | 127 | 266 |
| ಬಾವ್ಚ, ಬಾಮ್ಚ | 481 | 479 | 960 |
| ಭಿಲ್, ಭಿಲ್ ಗೆರೇಸಿಯಾ, ದೋಲಿ ಭಿಲ್, ಡುಂಗ್ರಿ ಭಿಲ್, ಡುಂಗ್ರಿ ಗೆರೇಸಿಯಾ, ಮೇವಾಸಿ ಭಿಲ್, ರಾವಲ್ ಭಿಲ್, ತದ್ವಿ ಭಿಲ್, ಭಾಗಾಲಿಯಾ, ಭಿಲ್ಲಾಲ, ವಸವ, ಪವ್ರ, ವಸವೇ | 3,136 | 3,068 | 6,204 |
| ಚೆಂಚು, ಚೆಂಚುವಾರ | 465 | 489 | 954 |
| ಚೋದರ | 72 | 45 | 117 |
| ದುಬ್ಲ, ತಲಾವಿಯ, ಹಲ್ಪಟಿ | 143 | 121 | 264 |
| ಗಮಿತ್, ಗಮ್ತ, ಗಾವಿತ್, ಮಾವ್ಚಿ, ಪಡ್ವಿ, ವಲ್ವ | 264 | 252 | 516 |
| ಗೊಂಡ, ನಾಯ್ಕೋಡ್, ರಾಜಗೊಂಡ | 80,691 | 77,552 | 158,243 |
| ಗೌಡಲು | 4,282 | 4,335 | 8,617 |
| ಹಕ್ಕಿಪಿಕ್ಕಿ | 6,039 | 5,853 | 11,892 |
| ಹಸಲರು | 11,849 | 12,617 | 24,466 |
| ಇರುಲರ್ | 360 | 343 | 703 |
| ಇರುಲಿಗ | 5,267 | 4,992 | 10,259 |
| ಜೇನುಕುರುಬ | 17,948 | 18,128 | 36,076 |
| ಕಾಡುಕುರುಬ | 5,984 | 5,969 | 11,953 |
| ಕಮ್ಮಾರ (ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಾಮರಾಜನಗರ ನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕುಗಳಿಗೆ ಸೀಮಿತ) | 493 | 456 | 949 |
| ಕಣಿಯನ್, ಕನ್ಯಾನ್ (ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿಗೆ ಸೀಮಿತ) | 204 | 209 | 413 |
| ಕಥೋಡಿ, ಕಟಕಾರಿ, ಡೋರ್ ಕಥೋಡಿ, | 143 | 131 | 274 |

| | | | |
|---|---|---|---|
| ಡೋರ್ ಕಟಕಾರಿ, | | | |
| ಕಾಟು ನಾಯಕನ್ | 83 | 85 | 168 |
| ಕೊಕ್ನ, ಕೊಕ್ನಿ, ಕುಕ್ನ | 15 | 17 | 32 |
| ಕೋಳಿಡೋರ್, ಟೋಕ್ರಿ ಕೋಲಿ, ಕೊಲ್ಚ, ಕೊಲ್ಗ | 57,304 | 54,886 | 112,190 |
| ಕೊಂಡ ಕಾಪು | 3,988 | 3,450 | 7,438 |
| ಕೊರಗ | 7,210 | 7,584 | 14,794 |
| ಕೋಟಾ | 70 | 51 | 121 |
| ಕೋಯಾ, ರಾಜ ಕೋಯ | 193 | 172 | 365 |
| ಕುಡಿಯಾ, ಮಲೆಕುಡಿ | 1,101 | 1,068 | 2,169 |
| ಕುರುಬ (ಕೊಡಗು ಜಿಲ್ಲೆಯಲ್ಲಿ ಮಾತ್ರ0 | 1,547 | 1,564 | 3,111 |
| ಕುರುಮಾನ್ಸ್ | 183 | 164 | 347 |
| ಮಹಾ ಮಲಸರ್ | 26 | 10 | 36 |
| ಮಲೈಕುಡಿ | 4,535 | 4,701 | 9,236 |
| ಮಲಸರ್ | 40 | 42 | 82 |
| ಮಲೆಯಾ ಕಂಡಿ | 61 | 55 | 116 |
| ಮಲೇರು | 227 | 213 | 440 |
| ಮರಾಠ (ಕೊಡಗು ಜಿಲ್ಲೆಯಲ್ಲಿ ಮಾತ್ರ) | 1,645 | 1,751 | 3,396 |
| ಮರಾಠಿ (ದ.ಕನ್ನಡ ಜಿಲ್ಲೆಯಲ್ಲಿ ಮತ್ರ) | 40,954 | 41,493 | 82,447 |
| ಮೇದ, ಮೇದರಿ, ಮೇದರು, ಗೌರಿಗ, ಬುರುಡ | 22,100 | 22,060 | 44,160 |
| ನಾಯ್ಕ್ಡ, ನಾಯಕ, ಚೋಲಿವಾಲ ನಾಯಕ, ಕಪಾಡಿಯಾ ನಾಯಕ, ಮೋಟ ನಾಯಕ, ನಾನ ನಾಯಕ, ನಾಯ್ಕ, ನಾಯಕ್, ಬೇಡ, ಬೇಡರ್ ಮತ್ತು ವಾಲ್ಮೀಕಿ | 1,656,859 | 1,639,495 | 3,296,354 |
| ಪಲಿಯನ್ | 112 | 114 | 226 |
| ಪಣಿಯನ್ | 237 | 258 | 495 |
| ಪಾರ್ಧಿ, ಅಡವಿ ಚಿಂಚರ್, ಫಾನ್ಸೆ ಪಾರ್ಧಿ | 5,415 | 5,331 | 10,746 |
| ಪಟೇಲಿಯಾ | 34 | 23 | 57 |
| ರಾಥ್ವ | 27 | 18 | 45 |
| ಶೋಲಗ | 28 | 24 | 52 |
| ಸೋಲಿಗರು | 16,860 | 16,959 | 33,819 |

| | | | |
|---|---|---|---|
| ತೋಡ | 66 | 81 | 147 |
| ವಾರ್ಲಿ | 38 | 20 | 58 |
| ವಿಟೋಲಿ, ಕೋಟ್ವಾಲಿಯಾ, ಬರೋಡಿಯಾ | 8 | 15 | 23 |
| ಯರವ | 14,862 | 15,497 | 30,359 |
| ಸಿದ್ದಿ (ಉತ್ತರ ಕನ್ನಡ ಜಿಲ್ಲೆಗೆ ಸೀಮಿತ) | 5,164 | 5,313 | 10,477 |
| ಇತರರು | 155,429 | 156,168 | 311,597 |
| **ಒಟ್ಟು** | **2,134,754** | **2,114,233** | **4,248,987** |

**ಮೂಲ: ಜನಗಣತಿ 2011**

2011 ನೇ ಜನಗಣತಿ ಪ್ರಕಾರ ರಾಜ್ಯದಲ್ಲಿ 3,09,66,657 ಪುರುಷರು ಮತ್ತು 3,01,28,640 ಮಹಿಳೆಯರನ್ನೊಳಗೊಂಡಂತೆ ಒಟ್ಟು 6,10,95,297 ಜನಸಂಖ್ಯೆಯನ್ನು ಹೊಂದಿದೆ. ಈ ಜನಸಂಖ್ಯೆಯಲ್ಲಿ 21,34,754 ಪುರುಷ ಮತ್ತು 21,14,233 ಮಹಿಳೆಯರನ್ನೊಳಗೊಂಡಂತೆ 42,48,987 (6.8%) ರಷ್ಟು ಪರಿಶಿಷ್ಟ ಬುಡಕಟ್ಟು ಜನರು ಕಂಡುಬರುತ್ತಾರೆ.

ಬುಡಕಟ್ಟುವಾರು ನೋಡಿದಾಗ ಶೇ.77.6ರಷ್ಟು ನಾಯ್ಕ್ಡ, ನಾಯಕ ಮತ್ತು ಅದರ ಉಪಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿವೆ. ಇನ್ನುಳಿದಂತೆ ಶೇ.3.72 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಗೊಂಡ್/ರಾಜಗೊಂಡ ಸಮುದಾಯವು ಕಂಡು ಬರುತ್ತದೆ. ಶೇ.2.64 ರಷ್ಟು ಜನಸಂಖ್ಯೆಯನ್ನು ಹೊಂದಿರುವ ಟೋಕ್ರಿಕೋಳಿ ಬುಡಕಟ್ಟು ಸಮುದಾಯವು ಮೂರನೇ ಸ್ಥಾನದಲ್ಲಿದ್ದು, ಶೇ.1.94 ಮರಾಠಿ ನಾಯಕ ಮತ್ತು ಶೇ. 1.04ರಷ್ಟು ಜನಸಂಖ್ಯೆ ಹೊಂದಿರುವ ಮೇದ ಬುಡಕಟ್ಟು ಸಮುದಾಯವು ಕ್ರಮವಾಗಿ 4 ಮತ್ತು 5 ಸ್ಥಾನಗಳಲ್ಲಿವೆ. ಇನ್ನುಳಿದಂತೆ ರಾಜ್ಯದ ಪ್ರಮುಖ ಅರಣ್ಯವಾಸಿ ಬುಡಕಟ್ಟುಗಳಾದ ಸೋಲಿಗ, ಜೇನುಕುರುಬ, ಬೆಟ್ಟಕುರುಬ, ಎರವ, ಹಕ್ಕಿಪಿಕ್ಕಿ, ಇರುಳಿಗ, ಮಲೆಕುಡಿಯಾ, ಡೋಂಗ್ರಿ ಗೆರೆಷಿಯಾ, ಸಿದ್ದಿ ಮುಂತಾದ ಎಲ್ಲಾ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಶೇ.1ಕ್ಕಿಂತಲೂ ಕಡಿಮೆಯಿರುವುದನ್ನು ಗಮನಿಸಬಹುದಾಗಿದೆ.

ಲಿಂಗವಾರು ಬುಡಕಟ್ಟು ಜನಸಂಖ್ಯೆನ್ನು ನೋಡಿದಾಗ ಹೆಚ್ಚು ಕಡಿಮೆ ಸಮ ಪ್ರಮಾಣದಲ್ಲಿದ್ದರೂ ಪುರುಷರ ಜನಸಂಖ್ಯೆ ಪ್ರಮಾಣ (ಶೇ.50.24) ತುಸು ಅಧಿಕವಾಗಿರುವುದನ್ನು ಕಾಣಬಹುದಾಗಿದೆ. (ವಿವರಗಳಿಗೆ ಕೋಷ್ಟಕ 1ನ್ನು ನೋಡಿ).

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 6.55% ರಷ್ಟು ಪರಿಶಿಷ್ಟ ಬುಡಕಟ್ಟು ಜನರು ರಾಜ್ಯದ ವಿವಿಧ ಭಾಗಗಳಲ್ಲಿ ಹಂಚಿ ಹೋಗಿದ್ದಾರೆ. ರಾಯಚೂರು (ಶೇ.18.1) ಅತಿ ಹೆಚ್ಚು ಪರಿಶಿಷ್ಟ ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದ್ದು, ಬಳ್ಳಾರಿ (18.0%), ಚಿತ್ರದುರ್ಗ (ಶೇ.17.5) ನಂತರದ

ಸ್ಥಾನಗಳಲ್ಲಿದೆ. ಶೇ.1ರಷ್ಟು ಬುಡಕಟ್ಟು ಹೊಂದಿರುವ ಮಂಡ್ಯ ಜಿಲ್ಲೆಯು ಕೊನೆಯ ಸ್ಥಾನದಲ್ಲಿದೆ. ಪರಿಶಿಷ್ಟ ಬುಡಕಟ್ಟು ಲಿಂಗಾನುಪಾತ 972 ರಷ್ಟಿದ್ದು, ಇದು ರಾಜ್ಯದ ಸರಾಸರಿ (965) ಮತ್ತು ರಾಷ್ಟ್ರದ ಸರಾಸರಿಗಿಂತಲ್ಲೂ (964) ಅಧಿಕವಾಗಿದೆ. (ವಿವರಗಳಿಗೆ ಕೋಷ್ಟಕ 2ನ್ನು ನೋಡಿ)

**ಕೋಷ್ಟಕ 2: ಕರ್ನಾಟಕ ರಾಜ್ಯದ ಬುಡಕಟ್ಟು ಜನಸಂಖ್ಯೆ (ಜಿಲ್ಲಾವಾರು)**

| | ಜಿಲ್ಲೆಗಳು | 2001ನೇ ಜನಗಣತಿ | 2011 ನೇ ಜನಗಣತಿ |
|---|---|---|---|
| 1 | ಬೆಳಗಾಂ | 243451 | 297198 |
| 2 | ಬಾಗಲಕೋಟೆ | 80181 | 97203 |
| 3 | ಬಿಜಾಪುರ | 30051 | 39314 |
| 4 | ಬೀದರ್ | 182219 | 235822 |
| 5 | ರಾಯಚೂರು | 303042 | 367071 |
| 6 | ಕೊಪ್ಪಳ | 138588 | 164271 |
| 7 | ಗದಗ | 54410 | 61654 |
| 8 | ದಾರವಾಡ | 70442 | 87548 |
| 9 | ಉತ್ತರ ಕನ್ನಡ | 23781 | 34239 |
| 10 | ಹಾವೇರಿ | 127163 | 141380 |
| 11 | ಬಳ್ಳಾರಿ | 364638 | 451406 |
| 12 | ಚಿತ್ರದುರ್ಗ | 266235 | 302554 |
| 13 | ದಾವಣಗೆರೆ | 209701 | 233112 |
| 14 | ಶಿವಮೊಗ್ಗ | 55997 | 65412 |
| 15 | ಉಡುಪಿ | 41613 | 52897 |
| 16 | ಚಿಕ್ಕಮಗಳೂರು | 41019 | 44970 |
| 17 | ತುಮಕೂರು | 193819 | 209559 |
| 18 | ಬೆಂಗಳೂರು ನಗರ | 86018 | 190239 |
| 19 | ಮಂಡ್ಯ | 17193 | 22402 |
| 20 | ಹಾಸನ | 26451 | 32329 |
| 21 | ದಕ್ಷಿಣ ಕನ್ನಡ | 62936 | 82268 |
| 22 | ಕೊಡಗು | 46115 | 58054 |
| 23 | ಮೈಸೂರು | 271351 | 334547 |
| 24 | ಚಾಮರಾಜನಗರ | 106111 | 120219 |
| 25 | ಗುಲ್ಬರ್ಗ | 154195 | 65259 |
| 26 | ಯಾದಗಿರಿ | – | 146849 |

| | | | |
|---|---|---|---|
| 27 | ಕೋಲಾರ | 205711 | 78875 |
| 28 | ಚಿಕ್ಕಬಳ್ಳಾಪುರ | – | 156487 |
| 29 | ಬೆಂಗಳೂರು (ಗ್ರಾ) | 61555 | 52903 |
| 30 | ರಾಮನಗರ | – | 22946 |
| **ಕರ್ನಾಟಕ** | | **3463986** | **4248987** |

**ಮೂಲ: ಜನಗಣತಿ 2001 ಮತ್ತು 2011**

**ಕೋಷ್ಟಕ 3: ಬುಡಕಟ್ಟು ಲಿಂಗಾನುಪಾತದ ವಿವರ**

| ವರ್ಷ | ಒಟ್ಟು ಲಿಂಗಾನುಪಾತ (ಎಲ್ಲಾ ಸಮುದಾಯ ಸೇರಿ) | ಬುಡಕಟ್ಟು ಲಿಂಗಾನುಪಾತ |
|---|---|---|
| 1991 | | 961 |
| 2001 | 965 | 972 |
| 2011 | 973 | 990 |

**ಮೂಲ: ಜನಗಣತಿ 1991–2011**

ಕೋಷ್ಟಕ 3ರಲ್ಲಿ ಬುಡಕಟ್ಟು ಮತ್ತು ರಾಜ್ಯದ ಒಟ್ಟು ಲಿಂಗಾನುಪಾತದ ಪ್ರಮಾಣವನ್ನು ನೀಡಲಾಗಿದೆ. 20011ರ ಜನಗಣತಿಯ ಪ್ರಕಾರ, ಪರಿಶಿಷ್ಟ ಪಂಗಡಗಳಲ್ಲಿನ ಲಿಂಗ (990) ಅನುಪಾತವು ರಾಜ್ಯದ ಸರಾಸರಿಗಿಂತಲೂ (973) ಅಧಿಕವಾಗಿದೆ. 1991ರಲ್ಲಿ 961 ಮತ್ತು 2001 ರಲ್ಲಿ 972ರಷ್ಟಿದ್ದ ಲಿಂಗಾನುಪಾತ ಸುಧಾರಣೆಯಾಗಿದೆ. ಸಾಂಸ್ಕೃತಿಕವಾಗಿ ಸಾಮಾನ್ಯ ಜನತೆಗಿಂತಲೂ ಪರಿಶಿಷ್ಟ ಪಂಗಡದವರಲ್ಲಿ ಅಧಿಕ ಲಿಂಗ ಸಮಾನತೆ ಇದೆ. ಏಕೆಂದರೆ ಇತರೆ ಜನವರ್ಗದಲ್ಲಿ ಗಂಡುಮಗುವಿಗೆ ಆದ್ಯತೆ ನೀಡುವ ಪುರುಷ ಪ್ರಧಾನ ಚಿಂತನೆಯು ಪ್ರಬಲವಾಗಿರುವುದು ಇದಕ್ಕೆ ಪುಷ್ಠಿ ನೀಡುತ್ತದೆ.

**ಕರ್ನಾಟಕದಲ್ಲಿ ಬುಡಕಟ್ಟು ಜನರ ಶಿಕ್ಷಣ ಮತ್ತು ಸಾಕ್ಷರತೆ**

ಸಾಮಾಜಿಕ, ಆರ್ಥಿಕ ಅಭಿವೃದ್ಧಿಯಲ್ಲಿನ ಸುಧಾರಣಾ ಸೂಚಿ ಹಾಗೂ ಜನಸಂಖ್ಯೆಗೆ ಸಂಬಂಧಿಸಿದ ಸೂಚಿಗಳ ಜೊತೆ ಸಾಕ್ಷರತೆಯು ಧನಾತ್ಮಕ ಸಂಬಂಧವನ್ನು ಹೊಂದಿದೆ. ಜನರು ಸಾಕ್ಷರರಾಗುವುದ್ದರಿಂದ ಅವರ ಜ್ಞಾನ ಹಾಗೂ ಕೌಶಲ್ಯದ ತಳಹದಿ ಭದ್ರವಾಗುತ್ತದೆ. ಇದರಿಂದ ಅವರ ಆದಾಯದಲ್ಲಿ ಏರಿಕೆಯಾಗುತ್ತದೆ. ಹಾಗೂ ಉತ್ಪಾದಕತೆಯಲ್ಲಿ ಸುಧಾರಣೆಯಾಗುತ್ತದೆ. **(ಕರ್ನಾಟಕ ಮಾನವ ಅಭಿವೃದ್ಧಿ ವರದಿ–2005)**

**ಕೋಷ್ಟಕ 4 : ಕರ್ನಾಟಕದಲ್ಲಿ ಬುಡಕಟ್ಟು ಸಾಕ್ಷರತೆ**

| ಪ್ರದೇಶ | 1991 | | | 2001 | | | 2011 | | |
|---|---|---|---|---|---|---|---|---|---|
| | ಪರುಷ | ಮಹಿಳೆ | ಒಟ್ಟು | ಪರುಷ | ಮಹಿಳೆ | ಒಟ್ಟು | ಪರುಷ | ಮಹಿಳೆ | ಒಟ್ಟು |
| ಒಟ್ಟು | 47.9 | 23.6 | 36.0 | 59.7 | 36.6 | 48.3 | 61.6 | 46.1 | 53.9 |
| ಗ್ರಾಮೀಣ | – | – | – | 56.9 | 33.3 | 45.3 | 59.2 | 42.8 | 51.1 |
| ನಗರ | – | – | – | 74.4 | 54.3 | 64.6 | 71.8 | 59.7 | 65.8 |

**ಮೂಲ: ಜನಗಣತಿ 1991–2011**

ಕರ್ನಾಟಕದಲ್ಲಿ ಪರಿಶಿಷ್ಟ ಬುಡಕಟ್ಟು ಸಾಕ್ಷರತೆಯು ನಿರಂತರವಾಗಿ ಒಟ್ಟು ಜನಸಂಖ್ಯೆಯ ಸಾಕ್ಷರತೆಗಿಂತ ಕೆಳಮಟ್ಟದಲ್ಲಿ ಇರುವುದು ಯೋಚಿಸಬೇಕಾದ ಸಂಗತಿಯಾಗಿದೆ. 1991ರಲ್ಲಿ ಶೇ.36.0ರಷ್ಟಿದ್ದ ಪರಿಶಿಷ್ಟ ಪಂಗಡಗಳ ಸಾಕ್ಷರತೆಯ 2001ರಲ್ಲಿ ಶೇ.48.3ಕ್ಕೆ ಹಾಗೂ 2011 ರಲ್ಲಿ ಶೇ. 53.9 ಏರಿದೆ. ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣವು ಶೇ.56.04ರಿಂದ 2001 ರಲ್ಲಿ ಶೇ.66.64ಕ್ಕೆ ಮತ್ತು ಶೇ.75.4ಕ್ಕೆ ಅಧಿಕಗೊಂಡಿದೆ. ಸಾಕ್ಷರತೆ ಕುರಿತಂತೆ ಒಟ್ಟು ಜನಸಂಖ್ಯೆ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ನಡುವೆ ಅಧಿಕ ಅಂತರವಿದ್ದರೂ, ಕಳೆದ ದಶಕದಲ್ಲಿ ಇದು ಸುಮಾರು ಶೇ.1.6 ರಷ್ಟು ಕಡಿಮೆಯಾಗಿದೆ. ದಶಕವಾರು ಸಾಕ್ಷರತಾ ಬೆಳವಣಿಗೆಯ ಪ್ರಮಾಣವು (ಶೇ.12.3) ಒಟ್ಟು ಜನಸಂಖ್ಯೆಯ ಸಾಕ್ಷರತಾ ಬೆಳವಣಿಗೆಯ ಪ್ರಮಾಣಕ್ಕಿಂತಲೂ (ಶೇ.10.6) ಅಧಿಕವಿದೆ.

ನಗರ ಪ್ರದೇಶಗಳಲ್ಲಿನ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು 2011 ರಲ್ಲಿ (65.8) ಬುಡಕಟ್ಟು ಜನವರ್ಗದ ಒಟ್ಟು ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆಯಲ್ಲದೇ, ಅದು ರಾಜ್ಯದ ಒಟ್ಟು ಜನಸಂಖ್ಯೆ ಸಾಕ್ಷರತಾ ಪ್ರಮಾಣಕ್ಕೆ ಬಹಳಷ್ಟು ಹೋಲಿಕೆಯಾಗುತ್ತದೆ.

ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತಾ ಪ್ರಮಾಣ 1991ರಲ್ಲಿ ಶೇ.23.6 ಮತ್ತು ಇದ್ದು 2001ರಲ್ಲಿ ಶೇ.36.6ಕ್ಕೆ ಮತ್ತು 2011ರಲ್ಲಿ 46.1 ಅಧಿಕಕೊಂಡಿದೆ. ಇದು ಪರಿಶಿಷ್ಟ ಸಾಕ್ಷರತೆಗಿಂತ ಅತೀ ಶೀಘ್ರಗತಿಯಲ್ಲಿ ಹೆಚ್ಚಳವಾಗಿದೆ. ಆದರೂ ಸಹ ಪುರುಷ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿನ ಅಂತರವು 1991ರಲ್ಲಿ ಶೇ.24.3ರಿಂದ 2001ರ ಹೊತ್ತಿಗೆ ಶೇ.23.1ಕ್ಕೆ ಇಳಿಕೆಯಾಗಿದ್ದು ಇದು ಕಡಿಮೆ ಮಟ್ಟದ್ದಾಗಿದೆ. ಮತ್ತೂ ಈ ಅಂತರವು ಒಟ್ಟು ಜನಸಂಖ್ಯೆಯಲ್ಲಿಯ ಪುರುಷ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿನ ಅಂತರಕ್ಕಿಂತಲೂ (1991ರಲ್ಲಿ 22.92 ಮತ್ತು 2001ರಲ್ಲಿ 19.22) ಅಧಿಕವಾಗಿದೆ.

ಒಟ್ಟಾರೆ, ರಾಜ್ಯದಲ್ಲಿನ ಇತರ ಗುಂಪುಗಳಿಗೆ ಹೋಲಿಸಿದರೆ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ. ರಾಜ್ಯದಲ್ಲಿಯ ಪರಿಶಿಷ್ಟ ಪಂಗಡಗಳ

ಪುರುಷ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಭಾರತದ ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತಲೂ ಉತ್ತಮಮಟ್ಟದಲ್ಲಿದೆ. ಈ ಅಂಶ ಕರ್ನಾಟಕವು ಇತರೆ ರಾಜ್ಯಗಳಿಗಿಂತ ಉತ್ತಮ

ಸಾಧನೆ ಮಾಡಿದೆ ಎಂಬುದನ್ನು ಸೂಚಿಸುತ್ತದೆ. ಆದರೂ, ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಸಾಕ್ಷರತಾ ಪ್ರಮಾಣವು ಇತರೆ ಗುಂಪುಗಳಲ್ಲಿನ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ. ಅವರ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಅಧಿಕ ಒತ್ತು ನೀಡಬೇಕಾಗಿದೆ. ಇದಕ್ಕಾಗಿ ಅಗತ್ಯ ನೀತಿ–ನಿರೂಪಣೆಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಬುಡಕಟ್ಟು ಸಮುದಾಯದ ಕೆಳಮಟ್ಟದ ಸಾಕ್ಷರತೆ ಮತ್ತು ಪ್ರಾಥಮಿಕ, ಮಾಧ್ಯಮಿಕ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅವರ ಅತೃಪ್ತಿಕರ ಸಾಧನೆ ಪರಸ್ಪರ ಸಂವಾದಿಯಾಗಿದೆ. ಬುಡಕಟ್ಟು ಪ್ರದೇಶಗಳಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಅಧಿಕವಾಗಿದ್ದು ಪ್ರಾಥಮಿಕ ಶಿಕ್ಷಣದ ಮೊದಲ 3 ರಿಂದ 4 ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ. ಇಲ್ಲವೇ ಹಾಜರಾಗುವುದಿಲ್ಲ. ಇದರಿಂದ ಮಕ್ಕಳು ಅನಕ್ಷರಸ್ಥರಾಗಿ ಉಳಿದು ಬಿಡುತ್ತಾರೆ. ಅಲ್ಲದೇ ವಿವಿಧ ಹಂತಗಳಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಿದೆ. ಶಿಕ್ಷಣದ ಮೊದಲ ಊರುಗೋಲೆ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಬುಡಕಟ್ಟು ಸಮುದಾಯಗಳ ಹೊರತು ಪಡಿಸಿ ಇತರ ಸಮುದಯಗಳ ಸಾಧನೆಯು ಉತ್ತಮವಾಗಿದೆ.

2001 ರಲ್ಲಿ 6 ರಿಂದ 14 ವರ್ಷದ (1 ರಿಂದ 8ನೇ ತರಗತಿ) ಬುಡಕಟ್ಟು ಮಕ್ಕಳ ಒಟ್ಟು ದಾಖಲಾತಿ ಪ್ರಮಾಣವು 90.12% ಆಗಿದೆ. ಇದು ಎಲ್ಲಾ ವಿದ್ಯಾರ್ಥಿಗಳ 98.81% ಮತ್ತು ಪರಿಶಿಷ್ಟ ಜಾತಿ ಮಕ್ಕಳ 104.57% ದಾಖಲಾತಿ ಪ್ರಮಾಣಕ್ಕಿಂತಲೂ ಅತ್ಯಂತ ಕಡಿಮೆಯಿದೆ. ಬೆಂಗಳೂರು ನಗರ (319.10%) ಮತ್ತು ಬಿಜಾಪುರ (270.65%) ಜಿಲ್ಲೆಗಳಲ್ಲಿ ರಾಜ್ಯದ ಒಟ್ಟು ದಾಖಲಾತಿ ಪ್ರಮಾಣ ಅಧಿಕವಾಗಿದೆ. ಆದರೆ ಈ ಜಿಲ್ಲೆಗಳಲ್ಲಿ ಪರಿಶಿಷ್ಟ ಬುಡಕಟ್ಟು ಜನಸಂಖ್ಯೆ ಅಧಿಕವಾಗಿಲ್ಲ. ಆದರೆ ಪರಿಶಿಷ್ಟ ಬುಡಕಟ್ಟು ಜನಸಂಖ್ಯೆ ಹೆಚ್ಚಿರುವ ಬಳ್ಳಾರಿ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು ದಾಖಲಾತಿ ಪ್ರಮಾಣ ಕ್ರಮವಾಗಿ 76.47%, 58.21% ಮತ್ತು 48.76% ರಷ್ಟಿದ್ದು, ರಾಜ್ಯದ ಸರಾಸರಿ ದಾಖಲಾತಿಗಿಂತ ಕಡಿಮೆ ಪ್ರಮಾಣದಲ್ಲಿದೆ. ಇದೇ ಹಾದಿಯಲ್ಲಿ ಚಾಮರಾಜನಗರ (86.02%), ಚಿತ್ರದುರ್ಗ (87.03%), ಕೊಡಗು (73.4%) ರಾಜ್ಯದ ಶಾಲಾ ದಾಖಲಾತಿ ಪ್ರಮಾಣವು ಸಹಾ ಕಡಿಮೆ ಪ್ರಮಾಣದಲ್ಲಿದೆ. ಈ ಜಿಲ್ಲೆಗಳು ಅಧಿಕ ಪ್ರಮಾಣದಲ್ಲಿ ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. (ಕರ್ನಾಟಕ ಮಾನವ ಅಭಿವೃದ್ಧಿ ವರದಿ,2005)

ಬುಡಕಟ್ಟು ಮಕ್ಕಳ ದಾಖಲಾತಿ ಪ್ರಮಾಣವನ್ನು ತರಗತಿವಾರು ಗಮನಿಸಿದಾಗ ಪ್ರಾಥಮಿಕ ಶಾಲೆಯಲ್ಲಿ ದಾಖಲಾತಿ ಪ್ರಮಾಣ ಪ್ರೌಢಶಾಲೆ ಮತ್ತು ಕಾಲೇಜು ಮಟ್ಟಕ್ಕೆ ಹೋಲಿಸಿದರೆ ಹೆಚ್ಚಿದೆ. ಆದರೆ ರಾಜ್ಯದ ಒಟ್ಟು ದಾಖಲಾತಿ ಪ್ರಮಾಣ ಮತ್ತು ಪರಿಶಿಷ್ಟ ಜಾತಿ ದಾಖಲಾತಿ ಪ್ರಮಾಣಕ್ಕಿಂತ ಕಡಮೆಯಿದೆ. ಅಲ್ಲದೆ ಲಿಂಗವಾರು ಗಮನಿಸಿದಾಗಲೂ ಸಹಾ ಗಂಡು ಮಕ್ಕಳ ದಾಖಲಾತಿ ಪ್ರಮಾಣಕ್ಕಿಂತ ಹೆಣ್ಣು ಮಕ್ಕಳ ದಾಖಲಾತಿ ಪ್ರಮಾಣ ಎಲ್ಲಾ ವರ್ಷಗಳಲ್ಲೂ ಹಾಗೂ ಎಲ್ಲಾ ತರಗತಿಗಳಲ್ಲೂ ಕಡಿಮೆಯಿರುವುದನ್ನು ಅರಿತುಕೊಳ್ಳಬಹುದಾಗಿದೆ.

2005 ರ ಮಕ್ಕಳ ಗಣತಿ ಪ್ರಕಾರ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಒಟ್ಟು ಮಕ್ಕಳ ಸರಾಸರಿ ಪ್ರಮಾಣವನ್ನು ನೋಡಿದಾಗ 1.54 ರಷ್ಟಿದ್ದು ಪರಿಶಿಷ್ಟ ಜಾತಿ 2.22 ರಷ್ಟಿದೆ. ಆದರೆ ಈ ಪ್ರಮಾಣ ಪರಿಶಿಷ್ಟ ಬುಡಕಟ್ಟು (2.42) ಮಕ್ಕಳಲ್ಲಿ ಹೆಚ್ಚಿದೆ. ಲಿಂಗವಾರು ಗಮನಿಸಿದಾಗ ಎಲ್ಲಾ ಸಮುದಾಯಗಳಲ್ಲೂ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಮಧ್ಯಂತರದಲ್ಲಿ ಶಾಲೆ ಬಿಡುತ್ತಾರೆ. ಆದರೆ ಈ ಪ್ರಮಾಣ ಬುಡಕಟ್ಟು ಹೆಣ್ಣು ಮಕ್ಕಳಲ್ಲಿ (2.67) ಅಧಿಕವಾಗಿದೆ. ಇದು ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಒಟ್ಟು ಪ್ರಮಾಣಕ್ಕಿಂತಲೂ ಅಧಿಕವಾಗಿದೆ. (ಕರ್ನಾಟಕ ಮಾನವ ಅಭಿವೃದ್ಧಿ ವರದಿ, 2005)

ಬುಡಕಟ್ಟು ಮಕ್ಕಳ ಗೈರುಹಾಜರಾತಿ ಮತ್ತು ಮಧ್ಯಂತರದಲ್ಲಿ ಶಾಲೆ ತೊರೆಯಲು ಪೋಷಕರ ಬಡತನ, ಅನಕ್ಷರತೆ, ನಿರಾಸಕ್ತಿ, ಮಕ್ಕಳಿಗೆ ಆಸಕ್ತಿಯ ಕೊರತೆ, ಅನಾರೋಗ್ಯ, ಕಿರಿಯ ಮಕ್ಕಳ ಪೋಷಣೆ, ಮಕ್ಕಳನ್ನು ಆರ್ಥಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುವುದು, ಪೋಷಕರ ವಲಸೆ, ಸಾರಿಗೆ ಸಮಸ್ಯೆ ಇನ್ನಿತರ ಅಂಶಗಳು ಕಾರಣವಾಗಿದೆ ಸಾಮಾನ್ಯವಾಗಿ ಅನಿಯಮಿತ ಹಾಜರಾತಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಂತದಲ್ಲಿ ಹೆಚ್ಚಿರುತ್ತದೆ. ಪ್ರದೇಶವಾರು ನೋಡಿದಾಗ ಅರಣ್ಯ ಮತ್ತು ಅರಣ್ಯದಂಚಿನಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಗಳಲ್ಲಿ ಅತಿ ಹೆಚ್ಚು ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಪೋಷಕರ ವಲಸೆ ಮತ್ತು ಸಾರಿಗೆ ಸಮಸ್ಯೆಯಿಂದ ನಿಯಮಿತವಾಗಿ ಶಾಲೆಗೆ ಹಾಜರಾಗದಿರುವುದು ಕಂಡು ಬಂದಿದೆ.

ರಾಜಕೀಯದಲ್ಲಿ ಭಾಗವಹಿಸುವಿಕೆಯು ಸಮುದಾಯಗಳ ರಾಜಕೀಯ ಸಬಲೀಕರಣವನ್ನು ಸೂಚಿಸುತ್ತದೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಜನಸಾಮಾನ್ಯರಿಗೆ ರಾಜಕೀಯ ಮತ್ತು ಆಡಳಿತದಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದೆ. ಆದರೆ ಬುಡಕಟ್ಟು ಸಮುದಾಯಗಳ ರಾಜಕೀಯ ಭಾಗವಹಿಸುವಿಕೆ ಇತರ ಸಮುದಾಯಗಳಿಗೆ ಹೋಲಿಸಿದಾಗ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದನ್ನು ಕಾಣಬಹುದಾಗಿದೆ.

**ಉಪಸಂಹಾರ**

ಮೇಲಿನ ಅಂಶಗಳನ್ನು ಗಮನಿಸಿದಾಗ ಬುಡಕಟ್ಟು ಜನರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ. ಹಾಗೂ ಸ್ವತಂತ್ರ ಭಾರತದ ನಂತರ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸಾಂವಿಧಾನಿಕವಾಗಿ ವಿವಿಧ ರೀತಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತಿತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿರುವುದರಿಂದ ಸ್ವಾತಂತ್ರ್ಯ ಪೂರ್ವಕ್ಕಿಂತ ಸ್ವಾತಂತ್ರ್ಯ ನಂತರದಲ್ಲಿ ಬುಡಕಟ್ಟು ಸಮುದಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ತುಸು ವೇಗವನ್ನು ಪಡೆದುಕೊಂಡಿದೆ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕ ಕೈಪಿಡಿ (2005), ಕರ್ನಾಟಕ ಸರ್ಕಾರ, ಬೆಂಗಳೂರು.
- ಮಂಜುನಾಥ. (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ, ಮೈಸೂರು ವಿ.ವಿ.
- ಮಾನವ ಅಭಿವೃದ್ಧಿ ವರದಿ. (2015). ಕರ್ನಾಟಕ ಸರ್ಕಾರ, ಬೆಂಗಳೂರು.
- ಶಂಕರರಾವ್. ಚ.ನ (2008). ಭಾರತೀಯ ಸಮಾಜ: ಪರಂಪರೆ ಮತ್ತು ಸಮಾಜ ಪರಿವರ್ತನೆ, ಜೈ ಭಾರತ್ ಪ್ರಕಾಶನ, ಮಂಗಳೂರು.
- Government of India (2011). Census Report-2011. Registrar General of india and Census Commissioner, Ministry of Home Affairs, New Delhi
- Kacther. G.F (1966). Educational Anthropology: an introduction. John wily and sons, NewYork.
- Marab,S.G. (1979). Tribal Education in Karnataka: A case study of the Soliga Tribe. Anthropological survey of India, Mysore
- Najundaih. H.V and Anathkrishna Iyer. (1930). The Mysore Tribes and Castes (Vol.IV). The Mysore University press, Mysore.
- Vidyarthi. L.P and B.K. Roy. (1976), Tribal Cultures of India. concept publishing company, New Dehli